ಮೇಲ್ದಂಡೆ ಯೋಜನೆಯು ದಿನಾಂಕ: 14-6-1999 ರಿಂದ ಈ ನಿಗಮದ ವ್ಯಾಪ್ತಿಗೆ ಒಳಪಡಿಸಲಾಗಿದೆ ಮತ್ತು ಈಗ ಕೆಲಸಗಳು ಪ್ರಗತಿಯಲ್ಲಿವೆ. ಪ್ರಾರಂಭದಿಂದ 2000-01 ರ ಸಾಲಿನವರೆಗೆ ಒಟ್ಟು ರೂ. 13696.39 ಲಕ್ಷಗಳ ರೂ.6856.00 ಲಕ್ಷ ಆರ್ಥಿಕ ಪ್ರಗತಿ ಸಾಧಿಸಲಾಗಿದೆ.

ಇ) ಈ ಯೋಜನೆಯನ್ನು ಮಾರ್ಚ್ 2003 ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಈ ಕಾಮಗಾರಿಯನ್ನು ಪೂರ್ಣಗೊಳಿಸುವ ಈ ಕೆಳಗಿನಂತೆ ಕ್ರ ಕೈಗೊಂಡಿದೆ.

ಈ ಯೋಜನೆ ಅಡಿ ಹೊಸದಾಗಿ ತುಂಗಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗುತ್ತಿರುವ ಹೊಸ ಡ್ಯಾಂ ಕಾಮಗಾರಿಯನ್ನು ಟೆಂಡರ್ ಆಧಾರದಡಿ ಮೆಃಮೈಸೂರು ಕನ್ಸ್ಟ್ರಕ್ಷನ್ ಕಂಪನಿ, ಬೆಂಗಳೂರು ಇವರಿಗೆ ದಿನಾಂಕ 13-10-99 ರಂದು ನೀಡಲಾಗಿದೆ. ಹಾಗೂ ಕೆಲಸ ಪ್ರಗತಿಯಲ್ಲಿದೆ.

ಕಿಮೀ.0-69 ರವರೆಗಿನ ಮುಖ್ಯ ಕಾಲುವೆಯ ಕೆಲಸ ಟೆಂಡರ್ ಆಧಾರದ ಮೇಲೆ ಕೈಗೊಂಡಿದ್ದು ಪ್ರಗತಿಯಲ್ಲಿದೆ. ಕಿ.ಮೀ. 70 ರಿಂದ 103 ರವರೆಗೆ ಟೆಂಡರ್‌ಗಳನ್ನು ಕರೆದಿದ್ದು, ಟೆಂಡರ್ ಪ್ರಕ್ರಿಯೆ ನಡೆದಿದೆ. ಕಿಮೀ. 104. ರಿಂದ 132 ರವರೆಗೆ ಇಲಾಖಾ ವತಿಯಿಂದ ಹಾಗೂ ಕಿಮೀ. 133 ರಿಂದ 339.50 ವರೆಗಿನ ಸರ್ವೆ ಕೆಲಸ ಖಾಸಗಿ ಸಂಸ್ಥೆಯಿಂದ ಕೈಗೊಂಡಿದ್ದು ಆದು ಪ್ರಗತಿಯಲ್ಲಿದೆ. ಹಾಗೂ ಹಾಲಿ ಕಿಮೀ. 17 4 ರವರೆಗೆ ಸರ್ವೆ ಕೆಲಸ ಮುಗಿದಿದೆ.

ಯೋಜನೆ ಪ್ರಾರಂಭವಾದಾಗಲಿಂದ ಫೆಬ್ರವರಿ 2001 ರ ಅಂತ್ಯಕ್ಕೆ ರೂ.6856.00 ಲಕ್ಷ ಹಣ ಖರ್ಚು ಮಾಡಲಾಗಿದೆ. ಪ್ರಸ್ತುತ ಸಾಲಿನಲ್ಲಿ ರೂ.5500.00 ಲಕ್ಷ ಹಣ ಈ ಯೋಜನೆಗೆ ಒದಗಿಸಲಾಗಿದ್ದು, ಫೆಬ್ರವರಿ 2001 ರ ಅಂತ್ಯಕ್ಕೆ ರೂ.2826.00 ಲಕ್ಷಗಳ ಆರ್ಥಿಕ ಪ್ರಗತಿ ಸಾಧಿಸಲಾಗಿದೆ.

ರಾಜ್ಯದಲ್ಲಿ ಬ್ರಾಂಡಿ ಅಂಗಡಿಗಳ ಪರವಾನಿಗೆ

1184 (1319) ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಹೊಸದಾಗಿ ಹೋಲ್ ಸೇಲ್ ಹಾಗೂ ರೀಟೈಲ್ ಬ್ರಾಂದಿ ಅಂಗಡಿಗಳನ್ನು ಪ್ರಾರಂಭಿಸಲು ಲೈಸೆನ್ಸ್ ಕೊಡುವ ಬಗ್ಗೆ ಸರ್ಕಾರ ದ ನೀತಿ ಹಾಗೂ ನಿರ್ಣಯವೇನು?

ಆ) ಯಾವ ಆಧಾರದ ಮೇಲೆ ನೀತಿಯನ್ನು ಅನುಸರಿಸಲಾಗುವುದು?

ಇ) ಹೊಸ ಲೈಸೆನ್ಸ್‌ಗಾಗಿ ಅರ್ಜಿಗಳನ್ನು ಕರೆಯಲಾಗುವುದೇ? ಯಾವಾಗ ಲೈಸೆನ್ಸ್ ನೀಡಲಾಗುವುದು ಹಾಗೂ ಕರಾರುಗಳೇನು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿ)

ಆ) ಸರ್ಕಾರವು 2000-2001 ನೇ ಸಾಲಿಗೆ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ 7 ಜಿಲ್ಲೆಗಳಿಗೆ ಸಿ ಎಲ್-1 ಸನ್ನದ್ದುಗಳನ್ನು ನೀಡಲು ಮಂಜೂರಾತಿ ನೀಡಿರುತ್ತದೆ. ಮತ್ತು ಈ ಹಿಂದೆ ಮಂಜೂರಾಗಿ ನವೀಕರಿಸದೇ ಇದ್ದ ಕೆಲವು ಜಿಲ್ಲೆಯ ಸಗಟು ಮದ್ಯ ಮಾರಾಟ ನನ್ನದ್ದುಗಳನ್ನು ನೀಡಲು ಮಂಜೂರು ಮಾಡಿರುತ್ತದೆ. ಹೊಸದಾಗಿ ಸಗಟು ಮತ್ತು ಚಿಲ್ಲರೆ ಮದ್ಯದಂಗಡಿ ನನ್ನದು ಮಂಜೂರಾತಿ ನೀಡುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತದೆ.

ಆ) ಕರ್ನಾಟಕ ಅಬಕಾರಿ (ಭಾರತೀಯ ಮದ್ಯ ಮಾರಾಟ ನಿಯಮಗಳು 1968 ರ ನಿಯಮ 12ರಂತೆ ಸನ್ನದನ್ನು ನೀಡಬಹುದಾಗಿದೆ.

ಇ) 2000-01 ನೇ ಸಾಲಗೆ ಸಿ ಎಲ್-2 ಮತ್ತು ಸಿ ಎಲ್ -9 ನನ್ನದು ನೀಡುವ ಬಗ್ಗೆ ಕೋಟಾ ನಿಗದಿಪಡಿಸಲು ಸಲ್ಲಿಸಿದ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದ ಡಿಸ್ಪಲರಿಗಳಿಂದ ಬರುವ ಆದಾಯ

1186 (1530) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿರುವ ಡಿಸ್ಪಿಲರಿಗಳು ಎಷ್ಟು ಇವೆ?

ಇವುಗಳಿಂದ ಬರುವ ಆದಾಯವೆಷ್ಟು?

ವಿವರ ನೀಡುವುದು?

ಶ್ರೀ ಎಸ್. ಎಂ.ಕೃಷ್ಣ (ಮುಖ್ಯಮಂತ್ರಿಗಳು)

1) 69

2000-2001 ನೇ ಸಾಲಿನಲ್ಲಿ ಒಟ್ಟು ಆದಾಯ ರೂ. 161.59 ಕೋಟಿ.

(01-04-2000 ರಿಂದ 28-2-2001 ರ ವರೆಗೆ) ವಿವರಗಳು ಈ ಕೆಳಕಂಡಂತಿದೆ.

1) ಮದ್ಯ ಮತ್ತು ಫೆನ್ನಿ ಮೇಲಿನ ಅಬಕಾರಿ ಸುಂಕ ಮತ್ತು (ಕೋಟಿ ರೂ.ಗಳಲ್ಲಿ)

ಲೀಟರ್ ಫೀನಿಂದ ರೂ. 139.00

2) ನನ್ನದ್ದು ಶುಲ್ಕದಿಂದ ರೂ. 22.59

ಒಟ್ಟು ರೂ. 161.59

ನೀರಾವರಿ ಇಲಾಖೆಯಲ್ಲಿ ಪಾವತಿಗಾಗಿ ಉಳಿದಿರುವ ಬಿಲ್ಲುಗಳ ವಿವರ

1189 (1332) ಶ್ರೀ ಎನ್.ಚಲುವರಾಯಸ್ವಾಮಿ (ನಾಗಮಂಗಲ) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

a) What is the total amount of pending bills tobe cleared; incl. of all the projects in execution of Cauvery Basing works as on today)

b) Has the Government intend to clear the pending bills (zonal-wise information be furnished)